'ಅದರಿಂದ ಏನು ಪ್ರಯೋಜನ? ಆ ದೇವರು ನನ್ನಿಂದ ನಿನಗೆ ಇಂಥಾ ಕಷ್ಟ ಬರೋದನ್ನ ತಪ್ಪಿಸಿದ್ದರೆ ಎಷ್ಟೋ ಚೆನ್ನಾಗಿರ್ತಿತ್ತು. ಹೊಳೇಲಿ ನೀರು ಮೊಕ್ಕೊಳೋವಾಗ ಹಂಗೇ ಕಾಲು ಜಾರಿ ಬಿದ್ದಿದ್ದರೆ ಈ ಕಷ್ಟ ಎಲ್ಲ ತಪ್ಪೋದು.'

ಝೀನತ್ ಎದೆ ಎದೆ ಬಡಿದುಕೊಳ್ಳುತ್ತಾ, ಮಗಳನ್ನು ಅವಚಿಕೊಂಡಳು.

'ಥೋ ಅಂಥಾ ಕೆಟ್ಟ ಮಾತಾಡಬೇಡ. ಶೈತಾನ್ ಹೇಳಿಕೊಡೋ ಮಾತೆಲ್ಲ ಕೇಳಿಸ್ಕೋಬ್ಯಾಡ. ಸುಮ್ಮನಿರು. ನಿಮ್ಮಪ್ಪ ವಾಪಸ್ ಬರೋದರೊಳಗೆ ಏನಾರೂ ಮಾಡನ.'

ಝೀನತ್ ಲೋಟಕ್ಕೆ ಟೀ ಬಗ್ಗಿಸಿದಳು. ಮಾತಾಡದೆ ಎರಡು ಗುಟುಕು ಕುಡಿದು, ಲೋಟ ತೆಗೆದು ಮಗಳ ಎದುರಿಗಿಟ್ಟು ಮೊಟ್ಟೆ ಒಡೆದು ಟೀ ಕಪ್ಪಿಗೆ ಹಾಕಿದಳು. ನೈಮಾ ಬಿಸಿ ಲೋಟ ಹಿಡಕೊಂಡು ಅವ್ವನನ್ನೇ ನೋಡುತ್ತಾ ಹಂಗೇ ಕೂತಿದ್ದಳು. ಹೊರಗಡೆ ಹೆಂಗಸರು ಇವತ್ತಿನ ಸಂತೆಯಲ್ಲಿ ಏನಾಗುತ್ತೋ, ಏನು ಕತೆಯೋ ಅಂದುಕೊಳ್ಳುತ್ತಿದ್ದುದು; ಗಂಡಸರು ಹೊಲದ ಕಡೆ ಹೋಗುತ್ತಾ, 'ಏನು?', 'ಎದ್ರಾ?' ಅನ್ನುತ್ತಿದ್ದುದು... ಇವರ ಕಿವಿಗೂ ಬಿತ್ತು. ಹೊರಗಿನವರ ಮಾತಿನ ನಡುವೆ, ಈ ಮನೆಯ ಬದಿಗೇ ಇದ್ದ ಹೊಲದ ಕಡೆಗೆ ಕೋಣ ಹೊಡೆದುಕೊಂಡು ಹೋಗುತ್ತಿದ್ದ ಹಮ್ದನ್‌ನ ನಗುವೂ ಕೇಳಿಸಿತು.

ಝೀನತ್ ಗೊಣಗಿದಳು, 'ಅವನ ಪಾಪಗಳ ಲೆಕ್ಕ ಅಲ್ಲಾ ಹತ್ರ ಇರುತ್ತೆ. ಎಷ್ಟು ಆರಾಮಾಗಿದಾನೆ ನೋಡು, ಯಾವ ಯೋಚನೇನೂ ಇದ್ದಂಗಿಲ್ಲ.'

ನೈಮಾ ಮೇಲೆದ್ದು ಸಿಂಬೆ ಮಾಡಿಕೊಳ್ಳಲು ತಲೆಗೆ ಬಟ್ಟೆ ಸುತ್ತಿಕೊಳ್ಳಲು ಶುರು ಮಾಡಿದಳು. ಝೀನತ್ ಅತ್ತ ತಿರುಗಿ ಮಗಳು ಸಂತೆಗೆ ಹೊರಡಲು ರೆಡಿಯಾಗುತ್ತಿದ್ದುದನ್ನು ನೋಡಿ, ಅವಳ ಲಂಗ ಹಿಡಿದು ಜಗ್ಗಿದಳು; ಮಗಳು ಮತ್ತೆ ಕೆಳಗೆ ಕುಂತಳು. ಯಾರೋ ಬಾಗಿಲು ಬಡಿದಂತಾಯಿತು. ಪಕ್ಕದ ಮನೆಯ ಉಮ್ ಅಲ್ ಖೈರ್ ದನಿ ಕೇಳಿಸಿತು:

'ಎಲ್ಲಾನ್ನೂ ದೇವರು ಚೆಂದಾಗಿಟ್ಟಿರಲಿ. ನೈಮಾ ನನ್ನ ಜೊತೆ ಸಂತೆಗೆ ಬತ್ತಾಳೋ ಹೆಂಗೆ? ಇನ್ನೂ ಎದ್ದಿಲ್ವ?'

'ಅವಳು ಸ್ವಲ್ಪ ದಿನ ನೆಂಟರ ಮನೇಲಿ ಇರೋಕೆ ಹೊರಡ್ತಾ ಇದಾಳೆ.'

'ಅಲ್ಲಾ ಅವಳನ್ನ ಸುಖವಾಗಿ ವಾಪಸು ಕರಕೊಂಬರಲಿ.'

ಇದೆಲ್ಲ ಏನವ್ವ ಅನ್ನುವಂತೆ ನೈಮಾ ಅವ್ವನ ಕಡೆಗೆ ನೋಡಿದಳು. ಝೀನತ್ ಬಾಯಿಯ ಮೇಲೆ ಬೆರಳಿಟ್ಟಳು. ಉಮ್ ಉಲ್ ಖೈರ್ ಹೆಜ್ಜೆಯ ಸದ್ದು ಸಣ್ಣಗಾದ ಮೇಲೆ ನೈಮಾ ಪಿಸುಗುಟ್ಟಿದಳು:

'ಏನು ಮಾಡಬೇಕೂ ಅಂತಿದೀಯವ್ವ? ಯಾವ ನೆಂಟರೂ?...'



ಝೀನತ್ ಮೇಲೆದ್ದವಳು ಬಟ್ಟೆಯ ಪೆಟ್ಟಿಗೆಯನ್ನೆಲ್ಲ ತಡಕಾಡಿ ಕಾಸು ಗಂಟಿಕ್ಕಿದ್ದ ಕರ್ಚೀಫು, ಹಳೆಯ ಬಟ್ಟೆ ಎರಡನ್ನೂ ಹೊರ ತೆಗೆದಳು; ಚಣ ಬಿಟ್ಟು ನೈಮಾ ಕೈಯಲ್ಲಿ ಕರ್ಚೀಫಿಟ್ಟು ಅದರ ಮೇಲೆ ಅವಳ ಬೆರಳು ಮುಚ್ಚಿ ಅಂದಳು:

'ತಗೋ. ಇದು ಇಷ್ಟು ದಿನ ಉಳಿಸಿದ್ದು.'

ನೈಮಾ ಸುಮ್ಮನೆ ನಿಂತೇ ಇದ್ದಳು. ಝೀನತ್ ಮಾತಾಡುತ್ತಲೇ ಇದ್ದಳು:

'ನಿನ್ನ ಬಟ್ಟೇನೆಲ್ಲ ಜೋಡಿಸಿಕೋ. ಸೀದಾ ರೈಲ್ವೇ ಸ್ಟೇಷನ್ನಿಗೆ ಹೋಗಿ ಕೈರೋಗೆ ಟಿಕೆಟ್ ತಗೋ. ಕೈರೋ ದೊಡ್ಡ ಊರು, ಮಗಳೆ. ಅಲ್ಲಾ ನಿನ್ನ ಸುಖವಾಗಿ ವಾಪಸ್ ಕರಕೊಂಬರೋತನಕ ಅಲ್ಲಿ ನಿನಗೆ ಹೊಟ್ಟೆಪಾಡಿಗೆ ಯಾವುದಾರೂ ಕೆಲಸ ಸಿಕ್ಕುತ್ತೆ,